
ಪದಬಂಧ




ಎಡದಿಂದ ಬಲಕ್ಕೆ:

1. ಅಭ್ಯುದಯ ಸಾಧಿಸುವ ವಿಧಾನಗಳ ಗಾಢ ಅಭ್ಯಾಸ (4)
3. ಪಾರಿತೋಷಿಕ ಪಡೆದಾಕೆ ಕಣ್ಮುಂದೆಯೇ ಬಂದಳೇ? (3)
4. ಕೆಟ್ಟವರ ಸಹವಾಸವನ್ನು ಬಿಡದಿದ್ದರೆ ಸದಾ ದುಃಖ (3)
6. ಪರಮೇಶ್ವರನ ಧ್ಯಾನದಲ್ಲೇ ಮೈಮರೆತರೆ? (4)
8. ಅಯ್ಯೋ! ಬಾರಿ ಬಾರಿಗೂ ಹೀಗೆ ಶತ್ರುವಿನದೇ ಹೆದರಿಕೆ (4)
10. ಈ ಹೆದ್ದಾರಿಯಲ್ಲಿ ಪಯಣಿಸಲು ಪರವಾನಗಿ ಬೇಕು (4)
12. ತಪಸ್ಸಿನ ಶಕ್ತಿ ಗಳಿಸಿದವನಿಗೆ ಅದೇ ಐಶ್ವರ್ಯ (4)
16. ಹತ್ತಾರು ವಸ್ತುಗಳು ಇದ್ದರೂ ಅನುಕೂಲ ಇಲ್ಲದಂತಾಗಿದೆ (3)
17. ನೈಜ ಕಥೆಗಳನ್ನು ಹೇಳಿದವ ಆಕೆಯ ತಂದೆ (3)
18. ಹಲವಾರು ಜನರ ನಡುವೆ ಇದ್ದಾಗಲೂ ನಾಚಿಕೆ ಇಲ್ಲದವನಾದನೇ? (4)

ಮೇಲಿಂದ ಕೆಳಕ್ಕೆ:

1. ಸಮಕ್ಷಮದಲ್ಲೇ ಮಾಡಿದ ತಪ್ಪು ಮನ್ನಿಸಲು ಯೋಗ್ಯವಲ್ಲ (3)
2. ವಾರ್ತೆಯನ್ನು ಓದುವ ಕ್ರಮದಲ್ಲಿ ಒಂದು ಹೊಸತನ (3)
3. ಧ್ಯಾನದ ಪ್ರೇರಣೆಗೆ ಕಾರಣವಾದದ್ದು ಓಂಕಾರ (3)
5. ರಂಗು–ರಂಗಿನ ಜನ! ಇದು ಶಹರ ತಾನೇ? (3)
6. ಪರ್ವತ ಶಿಖರಗಳಲ್ಲೆಲ್ಲ ಅತ್ಯಂತ ಶ್ರೇಷ್ಠವೆಂಬುದು ಹೇಗೆ? (4)
7. ನೂರು ತಾವರೆ ಮಾರಿ ಪಡೆದ ಗಿಡ ಮೂಲಿಕೆ (4)
8. ಅವನಾಗಿಯೇ ಹುತ್ತ ಏರಿದ್ದು ಎಂಥ ಕೇಡಾಯಿತು! (4)
9. ಮುಂಜಾನೆಯಿಂದಲೇ ಕ್ರಿಯಾಶೀಲ ಆ ಗುಂಪಿನ ಮುಂದಾಳು (4)
11. ಧಾರವಾಡದಲ್ಲಿ ಸದಾ ಬಾಯಾರಿಕೆ (3)
13. ಇಷ್ಟೂ ಪಶು ಪಕ್ಷಿಗಳನ್ನು ಕಾಪಾಡುವವ ಹೇಗಾದಾನು? (3)
14. ಸೀತೆಯ ದೇಗುಲವಿಡೀ ಏಕೆ ತಣ್ಣಗೆ? (3)
15. ಅಂಜುವವನ ಕಣ್ಣಿಗೆ ಕಾಡಿಗೆ ಬೇರೆ ಬೇಕೇ? (3)

## 22–1–15ರ ಉತ್ತರಗಳು

ಎಡದಿಂದ ಬಲಕ್ಕೆ:

1. ಜನ್ಮಕಾಲ; 3. ವಸಂತ; 4. ಲಾವಂಚ; 6. ನಡೆದಾಟ; 7. ಕನವರ; 8. ಸುರಪತಿ; 10. ತೆರೆಮರೆ; 12. ಕಟುನುಡಿ; 14. ಅತಿರೇಕ; 16. ರಮಣ; 17. 'ನಹಗ' (ಗಹನ ಹಿಂದು ಮುಂದು); 18. ಕರ್ಕಾಟಕ.

ಮೇಲಿಂದ ಕೆಳಕ್ಕೆ:

1. ಜತನ; 2. ಲಲಾಟ; 3. ವಶವರ್ತಿ; 5. ಚಕೋರ; 7. ಕಠೋರತೆ; 9. ತಿದ್ದುಪಡಿ; 11. ಮಧುರ; 13. ಅಂಟುರೋಗ; 14. ಅಣಕ. 15. ಕನಕ.


## ಪ್ರಶ್ನಾಂಕಣ

# ಕಟ್‌ಲ್ ಮೀನು - ವಿಶೇಷ ಏನು?

ಕಟ್‌ಲ್ ಮೀನು– ಅದು ಹೆಸರಿನಲ್ಲಷ್ಟೇ ಮೀನು. ಮತ್ಸ್ಯಗಳಿಗೂ ಕಟ್‌ಲ್ ಮೀನಿಗೂ ಯಾವುದೇ ವಿಧದ ಎಷ್ಟೇ ದೂರದ ಸಂಬಂಧವೂ ಇಲ್ಲ. ವಾಸ್ತವ ಏನೆಂದರೆ ಕಟ್‌ಲ್ ಮೀನು (ಚಿತ್ರ–1,3) ಒಂದು 'ಮೃದ್ವಂಗಿ.' ಶಂಖ, ಕವಡೆ ಇತ್ಯಾದಿ ನಾನಾ ವಿಧದ ಸುಣ್ಣದ ಚಿಪ್ಪುಗಳನ್ನು ನಿರ್ಮಿಸಿಕೊಳ್ಳುವ ಮೃದ್ವಂಗಿಗಳಲ್ಲಿ ಒಂದೂವರೆ ಲಕ್ಷಕ್ಕೂ ಅಧಿಕ ಪ್ರಭೇದಗಳಿವೆ; ಅವನ್ನೆಲ್ಲ ಐದು ವಿಭಿನ್ನ ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ. ಆ ಪೈಕಿ 'ಸೆಫಲೋಪಾಡ್' ವರ್ಗಕ್ಕೆ ಕಟ್‌ಲ್ ಮೀನು ಸೇರಿದೆ. ಸುಪ್ರಸಿದ್ಧ 'ಸ್ಕ್ವಿಡ್' (ಚಿತ್ರ–2) ಮತ್ತು 'ಆಕ್ಟೋಪಸ್'ಗಳದೂ ಇದೇ ಗುಂಪು. ಅವುಗಳಂತೆಯೇ ಕಟ್‌ಲ್ ಮೀನು ಆಂತರಿಕ ಚಿಪ್ಪನ್ನು ಪಡೆದಿದೆ.

ಆಕ್ಟೋಪಸ್ ಮತ್ತು ಸ್ಕ್ವಿಡ್‌ಗಂತೆಯೇ ಕಟ್‌ಲ್ ಮೀನು ಕೂಡ ಸಂಪೂರ್ಣ ಸಾಗರವಾಸಿ. ಅವುಗಳಂತೆಯೇ 'ಬುದ್ಧಿವಂತ' ಕೂಡ. ಕಟ್‌ಲ್ ಮೀನಿಗೂ ಚಾಚು ಕೈಗಳು ಇವೆ: ಉದ್ದುದ್ದನಾದ ಎಂಟು ಮತ್ತು ಅವುಗಳ ನಡುವೆ ಅಡಗಿದ ಮತ್ತೆರಡು. ಈ ಹತ್ತೂ ಚಾಚು ಕೈಗಳ ಒಳಬದಿಗಳಲ್ಲಿ ಸಾಲು ಸಾಲು ಹೀರುಬಾಯಿಗಳು. ಕಟ್‌ಲ್ ಮೀನುಗಳಲ್ಲಿ ಒಂದು ನೂರು ಪ್ರಭೇದಗಳಿವೆ. ಅತ್ಯಂತ ದೊಡ್ಡ ಪ್ರಭೇದ 'ಸೆಪಿಯಾ ಅಪಾಮಾ' (ಚಿತ್ರ–1,3) ನಾಲ್ಕು ಅಡಿ ಉದ್ದ ತಲುಪುತ್ತದೆ. ಕಡಲಲ್ಲಿ ಈಜಾಡುವಾಗ, ವೇಗವಾಗಿ ಸಂಚರಿಸುವಾಗ ತನ್ನ ಎಲ್ಲ ಚಾಚುಕೈಗಳನ್ನೂ ಜೋಡಿಸಿ ಮುಂಚಾಚಿ ಹಿಡಿವ ಈ ಪ್ರಾಣಿ ನಿಶ್ಚಲವಾಗಿರುವಾಗ ಅಷ್ಟೂ ಕೈಗಳನ್ನೂ ಜೋಂಡಿನ ಕಟ್ಟಿನಂತೆ ನೀರಲ್ಲಿ ಇಳಿಬಿಟ್ಟಿರುತ್ತದೆ. (ಚಿತ್ರ–1)

ಕಟ್‌ಲ್ ಮೀನಿನ ಪರಮ ವಿಸ್ಮಯ ಅದರ ವರ್ಣಬದಲಾವಣಾ ಗುಣ. ಈ




ಸಾಮರ್ಥ್ಯದಲ್ಲಿ ಅದು ಗೋಸುಂಬೆಯನ್ನೂ ಮೀರಿಸುತ್ತದೆ. ಕಟ್‌ಲ್ ಮೀನಿನ ಶರೀರವನ್ನು ಆವರಿಸಿದ ಚರ್ಮದ ಕೆಳಗೆ ವಿವಿಧ ವರ್ಣದ್ರವ್ಯಗಳು– ಹಳದಿ, ಹಸಿರು, ಕೆಂಪು, ಕಂದು ಇತ್ಯಾದಿ– ತುಂಬಿದ ಸೂಕ್ಷ್ಮ ಕೋಶಗಳು ಕಿಕ್ಕಿರಿದು ಹರಡಿವೆ. ಈ ಕೋಶಗಳು ಅಗತ್ಯಕ್ಕೆ ಅನುಸಾರ ಮಿದುಳಿನ ಆದೇಶದ ಪ್ರಕಾರ ಹಿಗ್ಗುತ್ತವೆ; ಚರ್ಮಕ್ಕೆ ವಿವಿಧ ವರ್ಣಗಳ ಚುಕ್ಕಿ ಪಟ್ಟೆ ಚಿತ್ತಾರಗಳನ್ನು ಒದಗಿಸುತ್ತವೆ. ಕಣ್ಮುಂದೆಯೇ, ಕ್ಷಣಾರ್ಧದಲ್ಲೇ ಈ ವರ್ಣದುಡುಗೆ ಬದಲಾಗುತ್ತದೆ (ಚಿತ್ರ–1,3 ವ್ಯತ್ಯಾಸ ಗಮನಿಸಿ). ತನ್ನ ಸುತ್ತಲಿನ ಪರಿಸರದಲ್ಲಿ ಲೀನವಾಗಲು, ಶತ್ರುಗಳಿಗೆ ಅಗೋಚರವಾಗಿರಲು, ಬಲಿಪ್ರಾಣಿಗಳಿಗೆ ಕಾಣದಂತೆ ಉಳಿಯಲು, ಸಂಗಾತಿಯನ್ನು ಆಕರ್ಷಿಸಲು ಕೂಡ ಕಟ್‌ಲ್ ಮೀನು ಈ ಸಾಮರ್ಥ್ಯವನ್ನು ಬಳಸುತ್ತದೆ.

ಮೀನುಗಳು, ಏಡಿ–ಸೀಗಡಿ ಇತ್ಯಾದಿ ಪ್ರಾಣಿಗಳನ್ನು ಬೇಟೆಯಾಡುವ ಕಟ್‌ಲ್ ಮೀನುಗಳದು ಅಲ್ಪ ಆಯುಷ್ಯ. ಎರಡು–ಮೂರು ವರ್ಷಗಳಷ್ಟೇ ಅವುಗಳ ಬದುಕು. ಅದೂ ಅಷ್ಟರೊಳಗೆ ಶಾರ್ಕ್–ಡಾಲ್ಫಿನ್‌ಗಳ ಬಾಯಿಗೋ, ಮನುಷ್ಯರ ಬಲೆಗೋ ಸಿಗದಿದ್ದರೆ ಮಾತ್ರ!

■ ಎನ್. ವಾಸುದೇವ್